**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಗೆ ಇಂದು ದಿನಾಂಕಃ 19.01.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ.ಕೆ.ಡಿ ವಕೀಲರಿಂದಃ**

ಆರೋಪಿತರು ನಮ್ಮ ಖಾಸ ಅಣ್ಣ-ತಮ್ಮಂದಿರು ಎಂದರೆ ಸರಿಯಲ್ಲ. ನಮ್ಮ ಅಡ್ಡಹೆಸರು ಮೌಲಾ ಎಂದು ಇರುತ್ತದೆ. ಆರೋಪಿತರ ಅಡ್ಡಹೆಸರು ಸಹ ಮೌಲಾ ಎಂದು ಇರುತ್ತದೆ. ಆರೋಪಿ ನಂ.8 ರಿಂದ 10 ರವರು ಸಿಂದಗಿ ತಲೂಕಿನ ಖಾನಾಪೂರ ಗ್ರಾಮದವರು ಎಂದರೆ ಸರಿ. ಅದೇರೀತಿ ನನ್ನ ಹೆಂಡತಿ ದಾವಲಬೀಯ ಊರು ಸಹ ಖಾನಾಪೂರ ಎಂದರೆ ನಿಜ. ಆರೋಪಿತ ನಂ.8 ರಿಂದ 10 ರವರ ಅಣ್ಣ-ತಮ್ಮಂದಿರ ಮಗಳು ನನ್ನ ಹೆಂಡತಿ ಎಂದರೆ ಸರಿ. ನನ್ನ ಮಾವನ ಹೆಸರು ಅಮೀನಸಾಬ ಎಂದರೆ ನಿಜ. ಖಾನಾಪೂರದಲ್ಲಿ ಆರೋಪಿತರು ಮತ್ತು ನಮ್ಮ ಮಾವನಾದ ಅಮೀಸಾಬ ಮಾತನಾಡುವುದಿಲ್ಲ ಎಂದರೆ ಸಾಕ್ಷಿಯು ಮೊದಲು ಒಬ್ಬರಿಗೊಬ್ಬರು ಸರಿ ಇದ್ದೆವು, ಆರೋಪಿತರು ನಮ್ಮನ್ನು ಹೊಡೆದುಹೋದ ನಂತರ ನಮಗೂ ಅವರಿಗೂ ಸರಿ ಇಲ್ಲ ಎಂದು ನುಡಿಯುತ್ತಾರೆ.

ಹದನೂರಿನಲ್ಲಿ ನಮ್ಮ ಜಮೀನು ಸರ್ವೆ ನಂ.37 ವಿಸ್ತೀರ್ಣ 01 ಎಕರೆ 10 ಗುಂಟೆ ಇರುತ್ತದೆ. ಯಾಳಗಿ ರಸ್ತೆಯ ದಕ್ಷಿಣ ದಿಕ್ಕಿಗೆ ನಮ್ಮ ಜಮೀನು ಇರುತ್ತದೆ, ಉತ್ತರಕ್ಕೆ ಆರೋಪಿತರ ಜಮೀನು ಇರುತ್ತದೆ. ಆರೋಪಿತರ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ಆದರೆ ಕ್ಷೇತ್ರ 8 ರಿಂದ 9 ಎಕರೆ ಇರಬಹುದು. ಸದರಿಯವರ ಜಮೀನಿನಲ್ಲಿ ಶ್ರೀಗಂಧದ ಸಸಿಗಳನ್ನು ನೆಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿತರು ಶ್ರೀಗಂಧದ ಕಟ್ಟಿಗೆ ವ್ಯಾಪ್ಯಾರ ಮಾಡುತ್ತಿದ್ದರೊ ಅಥವಾ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಆರೋಪಿತರು ಶ್ರೀಗಂಧದ ಕಳ್ಳತನ ಮಾಡಿದ ಬಗ್ಗೆ ಯಾರಿಗೂ ಹೇಳಿರುವುದಿಲ್ಲ. ದಿನಾಂಕ 21-02-2019 ರಂದು ಹೊಲಕ್ಕೆ ನಾನು, ಚಾಸಾ-4 ರಿಂದ 6, 8 ರವರು ಸೇರಿ ಹೋಗಿದ್ದೆವು. ನಾವು ಜೆ.ಸಿ.ಬಿಯಿಂದ ನಾವು ಹೊಲದಲ್ಲಿನ ಮುಳ್ಳನ್ನು ತೆಗೆಯುತ್ತಿದ್ದೇವು. ಸದರಿ ಜೆ.ಸಿ.ಬಿಯನ್ನು ನನ್ನ ಮಗ ಕರೆದುಕೊಂಡು ಬಂದಿದ್ದನು, ಅದು ಯಾವ ಊರಿನದು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಬೇಲಿಯನ್ನು ಹಾಕುವಾಗ ಸಮಯದ 9 ಗಂಟೆ ಒಳಗಡೆ ಆಗಿರುತ್ತದೆ. ಆರೋಪಿತರು ಅವರ ಹೊಲದಲ್ಲಿ ಇರಲಿಲ್ಲ, ನೇರವಾಗಿ ನಮ್ಮ ಹೊಲದ ಕಡೆ ಬಂದಿರುತ್ತಾರೆ. ಮೂರು ಬೈಕನ ಮೇಲೆ ಮೂರು ಜನರಂತೆ ಆರು ಜನ ಬಂದಿರುತ್ತಾರೆ. ಸದರಿ ಮೋಟಾರು ಸೈಕಲ ನಂಬರ ನನಗೆ ಗೊತ್ತಿರುವುದಿಲ್ಲ.

02. ಆರೋಪಿತರು ಪೈಕಿ 1, 2, 8 ಮತ್ತು 10 ನೇ ಆರೋಪಿತರು ನನಗೆ ಹೊಡೆದಿರುತ್ತಾರೆ. 4, 7, 5 ನೇ ಆರೋಪಿತರು ನನ್ನ ಮಗನನ್ನು ಹೊಡೆಯುತ್ತಿದ್ದರು. 1 ನೇ ಆರೋಪಿತನು ನನಗೆ ಕಟ್ಟಿಗೆಯಿಂದ ಹೊಡೆದಿರುತ್ತಾನೆ ಅದಕ್ಕೆ ನನ್ನ ಬಲಗೈ ಮುಂಗೈಗೆ ಕಟ್ಟಾಗಿರುತ್ತದೆ. ಮುಂಗೈ ಕಟ್ಟಾಗಿರುತ್ತದೆಯಾ ಎಂದು ಕೇಳಲು ಸಾಕ್ಷಿಯು ಕಟ್ಟಾಗಿರುವುದಿಲ್ಲ ಆದರೆ ಮುಂಗೈ ಉಬ್ಬಿ ಪ್ರಾಕ್ಚರ್ ಆಗಿರುತ್ತವೆ ಎಂದು ನುಡಿಯುತ್ತಾರೆ. ಪ್ರಾಕ್ಚರ್ ಎಂದರೆ ಎಲುಬು ಕಟ್ಟಾಗಿರುತ್ತದೆ ಎಂದು ಡಾಕ್ಟರ ಹೇಳಿರುತ್ತಾರೆ. ನಂತರ ನಾವು ಕೆಂಭಾವಿ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅದೇ ದಿನ ಗುಲ್ಬರ್ಗಾ ಆಸ್ಪತ್ರೆಗೆ ಹೋಗಿರುತ್ತವೆ. ಗುಲ್ಬರ್ಗಾದ ಜಯದೇವ ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ 05 ದಿನಗಳ ಕಾಲ ದಾಖಲಾಗಿದ್ದೆನು. ನನ್ನ ಮಗನಾದ ಚಾಸಾ-8 ಅದೇ ಆಸ್ಪತ್ರೆಯಲ್ಲಿ ಇದ್ದನು. ಅದೇರೀತಿ ಚಾಸಾ-7 ರವರು ಬಿಡಿಸಲು ಬಂದಾಗ ಆತನ ಕೈಗು ಸಹ ಪೆಟ್ಟಾಗಿ ಪ್ರಾಕ್ಚರ ಆಗಿರುತ್ತದೆ ಆತನು ಸಹ ಜಯದೇವ ಆಸ್ಪತ್ರೆಯಲ್ಲಿ ದಾಖಲಾಗಿದ್ದನು. ಪೋಲೀಸರು ನನ್ನ ಹೇಳಿಕೆಯನ್ನು ಪಡೆಯಲು ಗುಲ್ಬರ್ಗಾಕ್ಕೆ ಬಂದಿರುವುದಿಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ನೇರವಾಗಿ ನಮ್ಮ ಊರಿಗೆ ಬಂದಿರುತ್ತೇವೆ. ನಾನು ಗುಲ್ಬರ್ಗಾಯಿಂದ ಬಂದ ನಂತರ ನಾನು ಠಾಣೆಗೆ ಹೋಗಿರುವುದಿಲ್ಲ, ಪೋಲೀಸರೇ ನಮ್ಮ ಹೊಲಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪೋಲೀಸರು ನಮ್ಮ ಹೊಲಕ್ಕೆ ಬಂದಾಗ ನಾನು ಅಲ್ಲೆ ಇದ್ದೆನು. ಹೊಲದಲ್ಲಿ ಪೋಲೀಸರು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ನಾನು ನನ್ನ ಮಗ, ಚಾಸಾ-2 ರವರು ಮತ್ತು ಪೋಲೀಸರು ಇದ್ದರು. ಪೋಲೀಸರು ಬಂದು ಹೋದ ನಂತರ ಯಾವತ್ತು ನಮ್ಮನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಪೋಲೀಸರು ಬಂದು ನಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

03. ಎಲ್ಲಾ ಆರೋಪಿತರು ಈ ಪ್ರಕರಣದಲ್ಲಿ ಸಾಕ್ಷಿ ಹೇಳಿದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ನಾನು ಕೆಂಭಾವಿ ಪೋಲೀಸ ಠಾಣೆಗೆ ಮೋಹರಂ ಆದ ಮಾರನೇ ದಿನ ಹೋಗಿದ್ದೆನು. ಆದರೆ ದಿನಾಂಕ ನನಗೆ ನೆನಪಿರುವುದಿಲ್ಲ. ಆರೋಪಿತರು ಪೋಲೀಸ ಠಾಣೆಯಲ್ಲಿ ನಿನ್ನನ್ನು ಹೊಡೆದಿರುತ್ತಾರಾ ಎಂದು ಕೇಳಲು ಸಾಕ್ಷಿಯು ನಾನು ಪ್ರ.ವ.ವರದಿ ದಾಖಲಿಸಿ ಹೊರಗೆ ಬಂದಾಗ ನನ್ನನ್ನು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಇಬ್ಬರು ಪೋಲೀಸರು ಇದ್ದರು ಒಬ್ಬರ ಹೆಸರು ಸ್ವಾಮಿ ಎಂದು ಇರುತ್ತದೆ, ಇನ್ನೊಬ್ಬರ ಹೆಸರು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ಮೇಲೆ ಹೇಳಿದ ಎಲ್ಲಾ ವಿಷಯಗಳು ಎಲ್ಲಾ ಸುಳ್ಳು

ಇರುತ್ತವೆ ಎಂದರೆ ಸರಿಯಲ್ಲ. ದಿನಾಂಕ 21-01-2019 ರಂದು ಎಲ್ಲಾ ಆರೋಪಿತರು ಬಂದರು ಆ ಸಮಯದಲ್ಲಿ ನನ್ನ ಮಗ ಒಬ್ಬನೇ ಇದ್ದನು, ಆ ಸಮಯದಲ್ಲಿ ಆರೋಪಿತರು ಜಗಳ ತೆಗೆದು ನನ್ನನ್ನು ಮತ್ತು ನನ್ನ ಮಗನನ್ನು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಈ ದಿನ ಟಿಪ್ಪು ಇದ್ದರೆ ಆತನನ್ನು ಮುಗಿಸಿಯೇ ಬಿಡುತ್ತಿದ್ದೆವು ಮುಂದೆ ಸಿಕ್ಕರೆ ಬಿಡುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಎಲ್ಲರೂ ಬಂದು ನನಗೆ ಹೊಡೆದಿದ್ದರಿಂದ ನನ್ನ ಮುಂಗೈ ಪ್ರಾಕ್ಚರ್ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿ ನನ್ನ ಮಗ ಚಾಸಾ-7 ಈತನಿಗೂ ಸಹಿತ ಹೊಡೆದು ಆತನಿಗೆ ಬಲಗೈ ಪ್ರಾಕ್ಚರ್ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-8 ಈತನಿಗೂ ಸಹಿತ ಹೊಡೆದು ಆತನಿಗೂ ಪ್ರಾಕ್ಚರ್ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯರು ನೀಡಿದ ಎಲ್ಲಾ ದಾಖಲಾತಿಗಳನ್ನು ನಾವು ಪೋಲೀಸರಿಗೆ ನೀಡಿರುವುದಿಲ್ಲ. ನಾನು ಆಸ್ಪತ್ರೆಗೆ ದಾಖಲಾದ ಬಗ್ಗೆ ನಾನು ಪೋಲೀಸರಿಗೆ ಹೇಳಿರುತ್ತೇನೆ. ನಾನು ಯಾವುದೇ ಆಸ್ಪತ್ರೆಗೆ ದಾಖಲಾಗಿರುವುದಿಲ್ಲ, ನನಗೆ ಯಾವುದೇ ರೀತಿ ಗಾಯಗಳು ಆಗಿರುವುದಿಲ್ ಮತ್ತು ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ನನಗೂ ಹೊಲದ ಬದುವಿನ ಸಲುವಾಗಿ ಕಿರಿಕಿರಿ ಆಗಿದ್ದರಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 8 ರಿಂದ 10ನೇ ಆರೋಪಿತರು ಖಾನಾಪೂರ ಗ್ರಾಮದವರು, ಸದರಿಯವರಿಗೂ ಮತ್ತು ನಮ್ಮ ಮಾವನಿಗೆ ವೈಷ್ಯಮ್ಯೆ ಇರುವುದರಿಂದ ಸದರಿಯವರ ಮೇಲೆ ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನಮ್ಮ ಜಮೀನಿಗೆ ಬಂದು ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.